2017ನೇ ಸಾಲಿನ 'ಮ್ಯಾನ್ ಬುಕರ್ ಇಂಟರ್‌ನ್ಯಾಷನಲ್ ಪ್ರಶಸ್ತಿ' ಪಡೆದ ಇಸ್ರೇಲ್ ಲೇಖಕ ಡೇವಿಡ್ ಗ್ರಾಸ್‌ಮನ್‌ರ 'ಎ ಹಾರ್ಸ್ ವಾಕ್ಸ್ ಇಂಟು ಎ ಬಾರ್' ಕಾದಂಬರಿಯ ಆಪ್ತ ನೋಟ 'ಮಯೂರ'ದ ಓದುಗರಿಗಾಗಿ...

'...ಈ ಜೋಕಂತೂ ನನ್ನ ಹೊಟ್ಟೆ ಹುಣ್ಣಾಗಿಸಿ ಸಾಯಿಸೇ ಬಿಡುತ್ತೆ... ಯಾವಾಗ ಈ ಜೋಕ್ ಹೇಳಿದ್ರೂ ನಗು ತಡಕೊಂಡೇ ಹೇಳ್ಬೇಕು, ಯಾಕಂದ್ರೆ ಜೋಕ್ ಸ್ಪರ್ಧೆಗಳಲ್ಲಿ ನಿನ್ನ ಜೋಕಿಗೆ ನೀನೇ ನಕ್ಕರೆ ನೀನು ಸ್ಪರ್ಧೆಯಿಂದ ಔಟ್. ಒಂದ್ಸಾರಿ ಒಂದು ಕುದುರೆ ಬಾರ್‌ಗೆ ಹೋಗಿ ಬಾರ್‌ನವನ ಹತ್ರ ಗೋಲ್ಡ್‌ಸ್ಟಾರ್ ಬಿಯರ್ ಕೇಳುತ್ತೆ. ಬಾರ್‌ನವನು ಅದಕ್ಕೆ ಒಂದು ಲೋಟ ಬಗ್ಗಿಸಿಕೊಡುತ್ತಾನೆ. ಕುದುರೆ ಅದನ್ನ ಕುಡಿದು ವಿಸ್ಕಿ ಕೊಡು ಅನ್ನುತ್ತೆ. ಅದನ್ನೂ ಕುಡಿದು ಟೆಕ್ವಿಲ ಕೊಡು ಅನ್ನುತ್ತೆ. ಅದನ್ನೂ ಕುಡಿಯುತ್ತೆ. ಆಮೇಲೆ ವೋಡ್ಕ ಶಾಟ್ ಕೇಳಿ ಕುಡಿಯುತ್ತೆ, ಮತ್ತೊಂದು ಬಿಯರ್...'

ಟ್ರಕ್ ಡ್ರೈವರ್ ಹೇಳುತ್ತಿದ್ದ ಈ ಜೋಕನ್ನು ಕೇಳುತ್ತ ಕುಳಿತ 14 ವರ್ಷದ ಬಾಲಕ ದೊವಾಲೆಗೆ, 'ಇವನೇನಪ್ಪ ಈ ಡ್ರೈವರು ಹೀಗೆ ಪೆದ್ದುಪೆದ್ದಾಗಿ, ಅಸಂಬದ್ಧವಾಗಿ 1001 ರಾತ್ರಿಯ ಕತೆಗಳ ಥರ ಜೋಕ್ ಹೇಳ್ತಾನ್ವೆ' ಅನ್ನಿಸುತ್ತದೆ. ಆ ಕ್ಷಣ ಅವನಿಗೆ ಈ ಡ್ರೈವರ್‌ನಿಂದ ಬಿಡಿಸಿಕೊಂಡರೆ ಸಾಕು ಅಂತಲೂ ಅನ್ನಿಸುತ್ತದೆ.

2017ನೇ ಸಾಲಿನ ಪ್ರತಿಷ್ಠಿತ 'ಮ್ಯಾನ್ ಬುಕರ್ ಇಂಟರ್‌ನ್ಯಾಷನಲ್ ಪ್ರಶಸ್ತಿ' ಪಡೆದ ಇಸ್ರೇಲ್ ಲೇಖಕ ಡೇವಿಡ್ ಗ್ರಾಸ್‌ಮನ್‌ರ 'ಎ ಹಾರ್ಸ್ ವಾಕ್ಸ್ ಇಂಟು ಎ ಬಾರ್' ಕಾದಂಬರಿಯ ಒಂದು ಭಾಗ ಇದು. ದೊವಾಲೆಗೆ ಅನ್ನಿಸಿದ ಹಾಗೆಯೇ ನಮಗೂ ಈ ಡ್ರೈವರ್ ಹೇಳುತ್ತಿರುವುದರಲ್ಲಿ ಯಾವ ಮಹಾಜೋಕ್ ಇದೆ ಅಂತ ಅನ್ನಿಸಬಹುದು. ಆದರೆ ಜೋಕ್ ಹೇಳುತ್ತಿರುವ ಡ್ರೈವರ್‌ಗೆ ಇದು ಅತ್ಯಂತ ಸಂಕಟದ, ದಿಕ್ಕುತೋಚದ ಸಮಯ. ಯಾಕೆಂದರೆ ಅವನೊಳಗೆ ಸಾವಿನ ಸುದ್ದಿ ಅಡಗಿ ಕುಳಿತಿದೆ. ಅದು ಬಾಲಕ ದೊವಾಲೆ ತಾಯಿಯ ಸಾವಿನ ಸುದ್ದಿ. ದೊವಾಲೆಗೆ ಈ ವಿಷಯ ಗೊತ್ತಿಲ್ಲ. ಡ್ರೈವರ್‌ಗೆ ಅದನ್ನು ಹೇಳುವ ಧೈರ್ಯವಿಲ್ಲ. ಈ ರೀತಿಯ ಜೋಕುಗಳನ್ನು ಹೆಣೆಯುವಷ್ಟು ಹೊತ್ತು, ಅವನು ತನಗೂ ತಿಳಿಯದಂತೆ ತನ್ನೊಳಗಿನ ಸಾವಿನ ಸುದ್ದಿ ಬಿತ್ತರಿಸುವ ಕ್ಷಣವನ್ನು ಮುಂದೂಡುತ್ತಿರುತ್ತಾನೆ. ಕೊನೆಗೂ ಅವನು ದೊವಾಲೆಗೆ ಆ ಸುದ್ದಿ ಹೇಳುವುದೇ ಇಲ್ಲ. ಅವನ ಜೋಕ್ ಕೇಳುತ್ತ ಕೇಳುತ್ತ ದೊವಾಲೆಗೆ ಸಹಜವಾಗಿಯೇ '1001 ರಾತ್ರಿ'ಗಳ ನೆನಪು ಬರುತ್ತದೆ. 1001 ರಾತ್ರಿಗಳ 'ಅರೇಬಿಯನ್ ನೈಟ್ಸ್' ಕೂಡ ಸಾವನ್ನು ಮುಂದೆಹಾಕುವ ಕಥನವೇ. ಇದು ಕೇವಲ ಒಬ್ಬ ಡ್ರೈವರ್ ಮತ್ತು ಒಬ್ಬ ಹುಡುಗನ ಪಡಿಪಾಟಲು ಅಲ್ಲ. ಸಾವಿನ ಸಮ್ಮುಖದಲ್ಲಿಯೇ ಅದನ್ನು ಮರೆತು ಬದುಕನ್ನು ಕಟ್ಟಿಕೊಳ್ಳಬೇಕಾದ ಯೆಹೂದಿ ಜನಾಂಗದ ಕತೆ ಕೂಡ. ಪ್ರತಿಯೊಬ್ಬ ಮನುಷ್ಯನೂ, ಸಮುದಾಯವೂ ಯಾವಾಗಲೂ ಇಂಥ 'ಪ್ರಿಡಿಕಮೆಂಟ್'ನಲ್ಲಿಯೇ ಇರುವುದು. ನಮ್ಮ